Fax : 08192 - 208444
Telephone : 08192 - 208309
website : davangereuniversity.ac.in
e-mail : cdcdu2013@gmail.com

417
31-03-2021

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ - 577 007.

## ಕಾಲೇಜು ಅಭಿವೃದ್ಧಿ ಪರಿಷತ್

ಸಂಖ್ಯೆ:ದಾವಿವಿ/ಸಿಡಿಸಿ/ಸಂ-403/2020-21 5992 ದಿನಾಂಕ:23.03.2021

## : ಕಛೇರಿ ಜ್ಞಾಪನ :

ವಿಷಯ : ಮುಂದುವರಿಕೆ ಸಂಯೋಜನೆ ನೀಡುವ ಬಗ್ಗೆ.

ಉಲ್ಲೇಖ : 1. ಸ್ಥಳೀಯ ತಪಾಸಣಾ ಸಮಿತಿ ವರದಿ ದಿನಾಂಕ:05.11.2020.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08.03.2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರಲ್ಲಿ ಕಾಲೇಜಿನ ಮುಂದುವರಿಕೆ ಸಂಯೋಜನೆ ಕುರಿತು ಸ್ಥಳೀಯ ತಪಾಸಣಾ ಸಮಿತಿಯು ನೀಡಿರುವ ಶಿಫಾರಸ್ಸನ್ನು ದಿನಾಂಕ:18.01.2021ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ದಿನಾಂಕ:21.01.2021ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ಯಥಾವತ್ತಾಗಿ ಅನುಮೋದಿಸಲಾಗಿದೆ.

ಆದ್ದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 59(17)ರ ಮೇರೆಗೆ, ಸ್ಥಳೀಯ ತಪಾಸಣಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಕಾರ್ಯಗತಗೊಳಿಸಿ, ಪೂರಕ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ದಿನಾಂಕ:30.06.2021ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಷರತ್ತಿಗೊಳಪಟ್ಟು 2020-21ನೇ ಶೈಕ್ಷಣಿಕ ಸಾಲಿನ ಅವಧಿಗೆ ಮಾತ್ರ ಈ ಕೆಳಕಂಡಂತೆ ಸಂಯೋಜನೆ ಮುಂದುವರೆಸಲಾಗಿದೆ.

| **ಕಾಲೇಜಿನ ಹೆಸರು:** | | **ಶ್ರೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ.** | | |
|---|---|---|---|---|
| **ಪದವಿ** | **ಭಾಷೆಗಳು** | **ಐಚ್ಛಿಕ ವಿಷಯ ಸಮೂಹಗಳು** | **ಪ್ರವೇಶ ಮಿತಿ** | ಯೂನಿಟ್ |
| ಬಿ.ಇಡಿ., | ಕನ್ನಡ, ಇಂಗ್ಲೀಷ್ | ಕಡ್ಡಾಯ ವಿಷಯಗಳು | 50 | 02 |

**ಷರತ್ತುಗಳು:**

1. ಕಾಲೇಜಿನ ಮುಂದುವರಿಕೆ ಸಂಯೋಜನೆ ನವೀಕರಣ ನೀಡಲು, ಆನ್‌ಲೈನ್ ಸಂಯೋಜನಾ ಮಾರ್ಗಸೂಚಿ/ಮಾನದಂಡಗಳನ್ವಯ ಅವಶ್ಯವಿರುವ ಕನಿಷ್ಟ ಸಂಯೋಜನಾ ಅಂಕಗಳು >45% ಇರಬೇಕಾಗಿರುತ್ತದೆ. **2020-21ನೇ ಶೈಕ್ಷಣಿಕ ಸಾಲಿನಲ್ಲಿ** ಆನ್‌ಲೈನ್ ಸಂಯೋಜನಾ ಸಂಯೋಜನಾ ಅಂಕಗಳು 67.02% ಬಂದಿರುತ್ತವೆ.

   ಸರ್ಕಾರದ ಆದೇಶದ ಮೇರೆಗೆ, ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಒಂದು ಬಾರಿಯ ಕ್ರಮವಾಗಿ ಸಂಯೋಜನಾ ಅಂಕಗಳಲ್ಲಿ ಶೇಕಡಾ 05%ರಷ್ಟು ರಿಯಾಯಿತಿ ನೀಡಿ ಮುಂದುವರಿಕೆ ಸಂಯೋಜನೆಗೆ ಅನುಮತಿ ನೀಡಲಾಗಿದೆ.

   ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ >45% ಅಂಕಗಳನ್ನು ಗಳಿಸದಿದ್ದಲ್ಲಿ ಮತ್ತು ಭೂಮಿಯು ಸೇರಿದಂತೆ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳ (Defined Parameters) 08 ಅಂಶಗಳನ್ನು ಪೂರ್ಣಗೊಳಿಸದ ಪಕ್ಷದಲ್ಲಿ, ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿಗಳು, ತಮ್ಮ ಅಂತಿಮ ಪದವಿ

ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಕಾಲೇಜನ್ನು ನಡೆಸಲು ಅವಕಾಶ ನೀಡಲಾಗುವುದು. ನಂತರ ಕಾಲೇಜಿಗೆ ನೀಡಲಾಗಿರುವ ಸಂಯೋಜನೆಯನ್ನು ರದ್ದುಪಡಿಸಲಾಗುವುದು

2. ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಪಾಲಿಸತಕ್ಕದ್ದು ಹಾಗೂ ಸರ್ಕಾರದ ಆದೇಶದ ಮೇರೆಗೆ, ಅನುಬಂಧ-1ರಲ್ಲಿರುವ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು (Defined Parameters) ಕಾಲೇಜಿನಲ್ಲಿ ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳತಕ್ಕದ್ದು.

ಸಂಯೋಜನೆ ವರದಿ ಪ್ರತಿ ಲಗತ್ತಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು

ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ

ಗೆ,

1. ಪ್ರಾಂಶುಪಾಲರು, ಶ್ರೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, [illegible] ಹತ್ತಿರ, ಚಿತ್ರದುರ್ಗ.
2. ಕಛೇರಿ ಪ್ರತಿ.